**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ**

**ಸಿ.ಸಿ ನಂ. 82/2017**

ಫ್ರಾಸಾ – 9　　ಚಾಸಾ – 3

ಸಾಕ್ಷಿಯನ್ನು ದಿಃ 05.3.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ನಿಂಗಮ್ಮ |
| ತಂದೆಯ / ಗಂಡನ ಹೆಸರು | ಮಾದೇಗೌಡ |
| ವಯಸ್ಸು | 55 |
| ಉದ್ಯೋಗ | ವ್ಯವಸಾಯ |
| ವಾಸ | ಚನ್ನಪಿಳ್ಳೆಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

1. ಚಾಸಾ.1 ಪತಿ , ಚಾಸ 2 ಭಾವನ ಮಗ , ಚಾಸಾ 4 ರಿಂದ 7 ಪರಿಚಯ ಇದೆ. ಆರೋಪಿಗಳು ಗೊತ್ತು.
2. ಸುಮಾರು 10 ವರ್ಷಗಳ ಹಿಂದೆ ನನ್ನ ಭಾವನಿಗೆ ಸೇರಿದ ಜಮೀನು , ಸೈಟು ಅವರು ಮರಣಹೊಂದಿದ ನಂತರ ಪೌತಿ ಖಾತೆ 1 ನೆ ಆರೋಪಿಯ ತಾಯಿ ಹೆಸರಿಗೆ ಮಾಡಿರುತ್ತಾರೆ. ಸದರಿ ಸಂದರ್ಭದಲ್ಲಿ ಸರ್ವೆಯರು ಬಂದಾಗ ನನ್ನ ಪತಿ ಚಾಸಾ 1 ಅಳತೆ ಮಾಡಬೇಡಿ ತಡೆದಾಗ 1 ನೆ ಆರೋಪಿ ನನ್ನ ಪತಿಗೆ ದೊಣ್ಣೆಯಿಂದ ಹೊಡೆಯುತ್ತಿದ್ದರು. ದೊಣ್ಣೆಯಿಂದ ನನ್ನ ಪತಿಗೆ ಸಣ್ಣಪುಟ್ಟ ಗಾಯ ಆಗಿರುತ್ತದೆ ನಂತರ ನಾನು ಜಗಳ ಬಿಡಿಸಲು ಹೋದಾಗ ಎಲ್ಲ ಆರೋಪಿಗಳು ನನ್ನನ್ನು ಹಿಡಿದು ಎಳೆದಾಡಿ ಹಲ್ಲೆ ಮಾಡಿರುತ್ತಾರೆ. ನಂತರ ಊರಿನವರು ಬಂದು ಜಗಳ ಬಿಡಿಸಿರುತ್ತಾರೆ. ಈ ಸಂಬಂಧ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ .

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ತನ್ನ ಹೇಳಿಕೆ ವಿರುದ್ದ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಅ.ಅ ರವರಿಂದ**

4. ಆರೋಪಿಗಳು ನನಗೆ , ಪತಿಗೆ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ಆರೋಪಿಗಳು ನನ್ನ ಪತಿಗೆ ಗದ್ದಕ್ಕೆ , ಬಲಮೊಣಕೈ , ಬಲಮಂಡಿ ಎದೆ ಭಾಗಕ್ಕೆ ಹೊಡೆದರು ಎಂದರೆ ಸರಿ. 2 ನೆ ಆರೋಪಿ ಚಾಸ 2 ರವರಿಗೆ ಬಲಗೈ , ಹಣೆಗೆ ಹೊಡೆದರು ಎಂದರೆ ಸರಿ. 3 ನೆ ಆರೋಪಿ ಚಾಸಾ 2 ರವರಿಗೆ ಮೈಮೇಲೆ ಕೈಯಿಂದ ಹೊಡೆದರು ಎಂದರೆ ಸರಿ. ನನ್ನ ಪತಿಯನ್ನು ಬಿಡಿಸಲು ಹೋದಾಗ ಆರೋಪಿಗಳು ನನ್ನ ಮುಂದಲೆ ಹಿಡಿದು ಎಳೆದಾಡಿ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಎಂ ಎಸ್ ವಕೀಲರಿಂದಃ**

5. ಗಲಾಟೆ ಯಾವ ದಿನಾಂಕದಂದು ಆಗಿರುತ್ತದೆ ಗೊತ್ತಿಲ್ಲ. ಗಲಾಟೆ ಮದ್ಯಾಹ್ನ 12 ಗಂಟೆಗೆ ಆಗಿರಬಹುದು. ಜಮೀನಿನ ಸ.ನಂ , ವಿಸ್ತೀರ್ಣ ಗೊತ್ತಿಲ್ಲ. 1 ನೆ ಆರೋಪಿ ನನ್ನ ಭಾವನ ಮಗ. ಸರ್ವೆ ಮಾಡಲು ಬಂದಾಗ ಸರ್ಕಾರಿ ಸರ್ವೆಯರು ಬಂದಿದ್ದರು. ಸರ್ವೆ ಮಾಡಿರುವ ಜಾಗ 1 ನೆ ಆರೋಪಿಗೆ ಸೇರಿದ್ದು ಎಂದರೆ ಸರಿಯಲ್ಲ. ಸೈಟು ಮನೆ ನನ್ನ ಹೆಸರಿಗೆ ಸೇರಿದ್ದು ಎಂದು ಪೊಲೀಸರಿಗೆ ದಾಖಲಾತಿ ಸಲ್ಲಿಸಿಲ್ಲ. 1 ನೆ ಆರೋಪಿ ಸರ್ವೆಯರು ಜಮೀನನ್ನು ಅಳತೆ ಮಾಡಿಸಲು ಬಂದಿದ್ದರು ಎಂದರೆ ಸಾಕ್ಷಿಯು ನಮ್ಮ ಮೆ ಅಳತೆ ಮಾಡಲು ಬಂದಿದ್ದರು ಎಂದು ಹೇಳುತ್ತಾರೆ. ಜಮೀನು ಸಂಬಂಧಿಸಿದಂತೆ ನನ್ನ ಪತಿ ದಾವೆ ಸಲ್ಲಿಸಿದ್ದು ವಜಾ ಆಗಿರುತ್ತದೆ. ವಜಾ ಆದ ನಂತರ ಆರೋಪಿಗು ಮತ್ತು ನಮ್ಮ ಮಧ್ಯ ಇನ್ನೊಂದು ಸಿವಿಲ್ ದಾವೆ ಇದೆ ಎಂದರೆ ಸರಿ. ಮದ್ಯಾಹ್ನ 12 ಗಂಟೆಗೆ ಸರ್ವೆಯರನ್ನು 1 ನೆ ಆರೋೀಪಿ ಕರೆತಂದಾಗ ಚಾಸ 1 , 2

ಜಗಳ ಮಾಡಿ ಅವರನ್ನು ವಾಪಾಸು ಕಳಿಸಿರುತ್ತಾರೆ ಎಂದರೆ ಸರಿ. 1 ನೆ ಆರೋಪಿ ನಾನು ಪೊಲಿಸರಿಗೆ ದೂರು ಕೊಡುತ್ತೇನೆ ಎಂದು ಆ ಸಮಯದಲ್ಲಿ ಹೋದರು. ಆರೋಪಿ ಘಟನ ಸ್ಥಳದಿಂದ 12 ಗಂಟೆಗೆ ಹೋದಮೇಲೆ ಯಾವುದೆ ಗಲಾಟೆ ನಡೆದಿಲ್ಲ ಎಂದರೆ ಸರಿ. ಆರೋಪಿ ಆಸ್ಪತ್ರೆ ಹೋಗಿ ಬಂದ ನಂತರ ಸಂಜೆ5 ಕ್ಕೆ ಚಾಸ 1 , 2 ರವರ ಮೇಲೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಆರೋಪಿ ಚಾಸ 1 , 2 ರವರ ಮೇ ಲೆ ದೂರು ಸಲ್ಲಿಸಿದ ನಂತರ ಚಾಸ 1 , 2 ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಮೇಲೆ ದೂರು ಸಲ್ಲಿಸಿದ ನಂತರ ನಾವು ದ್ವೇಷದಿಂದ ಈ ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೊಪಿ ಕೊಟ್ಟ ದೂರಿಗೆ ಸಿಸಿ 720/17 ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ನಾನು ಸ್ಥಳದಲ್ಲಿ ಇರಲಿಲ್ಲ , ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

6. ಆರೋಪಿಗಳು ನನಗೆ ಯಾವುದೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನಗೆಕೂದಲು ಹಿಡಿದು ಎಳೆದಾಡಿ ಅದಕ್ಕೆ ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಆದರೆ ಅದರ ದಾಖಲಾತಿ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಚಾಸ 2 ಅವರ ಮಾವ ಪೊಲಿಸ್ ಅಧಿಕಾರಿ. ಅವರ ಹೇಳಿಕೆ ಪೂರಕವಾಗಿ ಈ ದೂರುಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ 2 ಆ ದಿನ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅವರು ನಮ್ಮ ರಕ್ತ ಸಂಬಂಧಿ ಆಗಿದ್ದು ಸಿವಿಲ್ ವ್ಯಾಜ್ಯ ದ್ವೇಷದ ಮೇಲೆ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ